**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 490/2023

ಪಿಡಬ್ಲು :3 ಸಿಡಬ್ಲು :4

| | |
|---|---|
| ಸಾಕ್ಷಿಯ ಹೆಸರು | : ಶ್ರೀಮತಿ. ನೀಲಾವತಿ ಸದಾಶಿವ ಸನದಿ |
| ಗಂಡನ ಹೆಸರು | : ಶ್ರೀ.ಸದಾಶಿವ ಸನದಿ |
| ವಯಸ್ಸು | : 55 ವರ್ಷ |
| ಉದ್ಯೋಗ | : ಗೃಹಿಣಿ |
| ವಾಸ್ತವ್ಯ | : ಶಿರಹಟ್ಟಿ |
| ದಿನಾಂಕ | : 13-02-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 1 ನನ್ನ ಗಂಡ. ಚಾಸಾಃ 5 ಮತ್ತು ಚಾಸಾಃ 6 ನನ್ನ ಮಕ್ಕಳು. ಚಾಸಾಃ 7 ರಿಂದ ಚಾಸಾಃ 10 ರವರ ಪರಿಚಯ ಇರುತ್ತದೆ. ಅದೇ ರೀತಿ ಈ ಪ್ರಕರಣದ 2ನೇ ಆರೋಪಿ ಪರಿಚಯ. ಅದೇ ರೀತಿ ಈ ಪ್ರಕರಣದ 2ನೇ ಆರೋಪಿಯ ಮಗ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಜಾಫರ ತಾಂಬೋಳಿ ಪರಿಚಯ. ನಮ್ಮದು ಹಿಂದೂ ತಳವಾರ ಜಾತಿಯಾಗಿರುತ್ತದೆ.

2. ನಮ್ಮ ಮತ್ತು ಆರೋಪಿತರ ಜಮೀನು ಅಕ್ಕಪಕ್ಕದಲ್ಲಿ ಇರುತ್ತವೆ. ನಮ್ಮ ಹೊಲದಲ್ಲಿರುವಂತಹ ಗಾಳಿ ಮರ ಮತ್ತು ತೆಂಗಿನ ಮರದ ನೆರಳು ಆರೋಪಿತರ ಜಮೀನಿನಲ್ಲಿ ಬಿಳುತ್ತಿದ್ದು ಆದ ಕಾರಣ ನಮ್ಮ ಜಮೀನಿನಲ್ಲಿ ಸರಿಯಾಗಿ ಬೆಳೆ ಬರುವುದಿಲ್ಲ ಆದ ಕಾರಣ ಅವುಗಳನ್ನು ತೆಗಿರಿ ಅಂತಾ ಹೇಳಿದ್ದು ಅದಕ್ಕೆ ನಾವು ಒಪ್ಪಿ ಕೊಂಡಿರುತ್ತೇವೆ. ಅದೇ ರೀತಿ ನಮ್ಮ ಜಮೀನಿಗೆ ಹೋಗಬೇಕಾದರೆ ಆರೋಪಿತನ ಜಮೀನಿನಲ್ಲಿ ಸ್ವಲ್ಪ ರಸ್ತೆ ಇದ್ದು ಅಲ್ಲಿ ನಾವು ಹಾಯ್ದು ಹೋಗಬೇಕಾಗುತ್ತದೆ, ಆರೋಪಿತನು ಸದರಿ ರಸ್ತೆಯಲ್ಲಿ ನೀವು ಹಾಯ್ದು ಹೋಗಬೇಡಿ ಅಂತಾ ನಮ್ಮೊಂದಿಗೆ ತಂಟೆ ತಕರಾರು ಮಾಡುತ್ತಾ ಬಂದಿದ್ದನು.

3. ಈಗ ಒಂದು ವರ್ಷದ ಹಿಂದೆ ರವಿವಾರ ದಿವಸ ನಮ್ಮ ಊರಿನಲ್ಲಿ ಇದ್ದಂತಹ ಸಂತೆಗೆ 4.00 ಗಂಟೆಗೆ ನಾನು ಮತ್ತು ನನ್ನ ಮಗ ಕೂಡಿಕೊಂಡು ನಮ್ಮ ಮೋಟರಸೈಕಲ ತೆಗೆದುಕೊಂಡು ಶಿರಹಟ್ಟಿ ಮರಡಿ ಪ್ಲಾಟ್ ಹತ್ತಿರ ಹೋಗಿದ್ದೇವು, ನಂತರ ಸಾಯಂಕಾಲ 4.30 ಗಂಟೆ ಸುಮಾರಿಗೆ ನಾವು ಕಿರಾಣಿ ಸಂತೆ ತೆಗೆದುಕೊಂಡು ಸಂತೆಯವರೆಗೆ ನನ್ನ ಮಗ ಮಧು ಇತನು ಸಂತೆ ಕೈಚೀಲ ಹಿಡಿದುಕೊಂಡು ಮೋಟರಸೈಕಲ ಮೇಲೆ ಕೂತಿದ್ದನು ನಾನು ಕಿರಾಣಿ ಖರೀದಿ ತೆಗೆದುಕೊಂಡು ಅಂಗಡಿಗೆ ರೊಕ್ಕ ಕೊಡಲು ಸಂತೆಯಲ್ಲಿ ಹೋಗಿದ್ದೇನು ಆಗ ನನ್ನ ಮಗ ಮಧು ಇತನಿಗೆ ಮುಬಾರಕ ತಂಬೋಳಿ ಇತನ ಮಗ ಬಡೆದಿರುತ್ತಾನೆ ಅಂತಾ ಜನರು ಚಿರುತ್ತಿದ್ದರು ಆಗ ನಾನು ಹುಡುಕೊಂತ ಹೋದೇನು ಆಗ ಅಲ್ಲಿ ಸ್ವಲ್ಪ ದೂರದಲ್ಲಿ ನನ್ನ ಮಗ ನೆಲದ ಮೇಲೆ ಬಿದ್ದಿದ್ದು ಆತನನ್ನು ನೋಡಲಾಗಿ ಆತನ ತಲೆಯ ಹಿಂಭಾಗಕ್ಕೆ ಪೆಟ್ಟಾಗಿ ರಕ್ತ ಬರುತ್ತಿತ್ತು. ಅದೇ ರೀತಿ ಜಾಫರ ತಾಂಬೋಳಿ ಇತನು ಕಟ್ಟಿಗೆಯನ್ನು ತೆಗೆದುಕೊಂಡಿದ್ದನ್ನು ನಾನು ನೋಡಿರುತ್ತೇನೆ.

4. ಅಲ್ಲೇಯೇ ನಮ್ಮ ಸಂಬಂಧಿಕರಾದ ಚಾಸಾಃ 7 ರಿಂದ ಚಾಸಾಃ 9 ರವರು ಹಾಜರಿದ್ದರು. ಚಾಸಾಃ 8 ಇತನು ನಿನ್ನ ಮಗನಿಗೆ ತಾಂಬೋಳಿಯವರ ಮಗ ಜಾಫರ ಇತನು ಬಡೆದಿರುತ್ತಾನೆ ವೈನಿ ಅಂತಾ ಹೇಳಿದನು. ಅದೇ ರೀತಿ ಚಾಸಾಃ 8 ಇತನು ರಕ್ತಗಾಯವಾದಂತಹ ನನ್ನ ಮಗನನ್ನು ಹಿಡಿದುಕೊಂಡು ಕುಳಿತಿದ್ದನು ನಾನು ಆಗ ನನ್ನ ಗಂಡನಿಗೆ ಪೋನ ಮಾಡಿ ವಿಷಯ ತಿಳಿಸಿದೆನು, ಆಗ ಅಲ್ಲಿಗೆ ನನ್ನ ಗಂಡ ಚಾಸಾಃ 1 ಹಾಗೂ ನನ್ನ ಮಗಳು ಚಾಸಾಃ 6 ಘಟನಾ ಸ್ಥಳಕ್ಕೆ ಬಂದರು. ಚಾಸಾಃ7 ಮತ್ತು ಚಾಸಾಃ 9 ರವರು ನನ್ನ ಮಗನನ್ನು ಮೋಟರಸೈಕಲ ಮೇಲೆ ನಮ್ಮ ಮನೆಗೆ ಕರೆದುಕೊಂಡು ಹೋದರು.

5. ನಾನು ಇನ್ನೊಂದು ಮೋಟರಸೈಕಲ ಮೇಲೆ ಸಂತೆ ಚೀಲ ಹಾಗೂ ಜಾಫರ ಇತನು ನನ್ನ ಮಗನ ಮೇಲೆ ಹಲ್ಲೆ ಮಾಡಿದ ಬಡಿಗೆಯು ಎರಡು ತುಂಡುಗಳಾಗಿದ್ದು ಅವುಗಳನ್ನು ನಮ್ಮ ಮನೆಯವರಿಗೆ ತೋರಿಸಬೇಕೆಂದು ಅವುಗಳನ್ನೂ ಸಹ ನನ್ನೊಂದಿಗೆ ಮನೆಗೆ ತೆಗೆದುಕೊಂಡು ಬಂದಿರುತ್ತೇನೆ. ನನ್ನ ಗಂಡ ಮತ್ತು ನನ್ನ ಮೈದುನನ ಮಗ ಚಾಸಾಃ 10

ಕೂಡಿಕೊಂಡು ಉಪಚಾರಕ್ಕೆಂದು ಅಥಣಿಗೆ ಮೋಟರಸೈಕಲ ಮೇಲೆ ಕರೆದುಕೊಂಡು ಹೋದರು, ನಾನು ಮನೆಯಲ್ಲಿಯೇ ಉಳಿದೆನು.

6. ಘಟನೆಯ ವಿಷಯವಾಗಿ ನನ್ನ ಗಂಡ ಚಾಸಾಃ 1 ದೂರು ನೀಡಿರುತ್ತಾರೆ. ನನ್ನ ಗಂಡ ಪಿರ್ಯಾದಿ ನೀಡಿದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಚೌಕಾಸಿ ಮಾಡಿ ತಾಂಬೋಳಿಯವರ ಮಗ ಸಿಗವಲ್ಲ ಅಂತಾ ಹೇಳಿರುತ್ತಾರೆ ಮತ್ತು ಘಟನಾ ಸ್ಥಳದ ಪಂಚನಾಮೆಯನ್ನು ಮಾಡಿದ್ದು ಘಟನಾ ಸ್ಥಳವನ್ನು ನಾನು ಪೋಲಿಸರಿಗೆ ತೋರಿಸಿರುತ್ತೇನೆ ಆಗ ಪೋಲಿಸರು ಘಟನಾ ಸ್ಥಳದಲ್ಲಿ ಬರವಣಿಗೆ ಮಾಡಿ ಪೋಟೋ ತೆಗೆದಿದ್ದು ಬರವಣಿಗೆ ಮಾಡಿದ ದಾಖಲೆಗೆ ನನ್ನ ಹೆಬ್ಬಟ್ಟಿನ ಗುರುತನ್ನು ತೆಗೆದುಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ನಾನು ಕಟ್ಟಿಗೆ ತುಂಡುಗಳನ್ನು ಪೋಲಿಸರ ಮುಂದೆ ಹಾಜರುಪಡಿಸಿದ್ದು ಅವುಗಳ ಪೋಟೋ ತೆಗೆದು ಅವುಗಳನ್ನು ಜೀಪಿನಲ್ಲಿ ಹಾಕಿಕೊಂಡು ಹೋಗಿರುತ್ತಾರೆ. ಅದೇ ರೀತಿ ಈ ಪ್ರಕರಣದ 2ನೇ ಆರೋಪಿ 1ನೇ ಆರೋಪಿಯ ತಂದೆ ಆಗಿದ್ದು ಆತನು ತನ್ನ ಮಗನಾದ ಜಾಫರ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಇತನಿಗೆ ನನ್ನ ಮಗ ಚಾಸಾಃ 5 ಇತನ ತಲೆ ತಗಿ ಅಂತಾ ಹೇಳಿದ್ದರಿಂದ ಸದರಿ ಬಾಲಕನು ನನ್ನ ಮಗನ ಮೇಲೆ ಕಟ್ಟಿಗೆಯಿಂದ ಹಲ್ಲೆ ಮಾಡಿರುತ್ತಾನೆ.

7. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಅಪರಾಧ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿಪಿಃ3 ಎಂದು, ನಿಪಿಃ3 ರ ಮೇಲೆ ಹೆಬ್ಬಟ್ಟಿನ ಗುರುತು ಇದ್ದ ಕಾರಣ ಅದನ್ನು ನಿಶಾನೆಕರಿಸಿರುವುದಿಲ್ಲ. ಸಾಕ್ಷಿಗೆ ನ್ಯಾಯಾಲಯದ ಮುಂದಿದ್ದ ಎರಡು ಪೋಟೋಗಳನ್ನು ತೋರಿಸಲಾಗಿ, ಅವುಗಳನ್ನು ನೋಡಿ ಅವುಗಳಲ್ಲಿ ತಾನು, ಚಾಸಾಃ2 ಮತ್ತು ಚಾಸಾಃ 3 ಹಾಗೂ ಪೋಲಿಸರು ಇರುವುದಾಗಿ ಅವುಗಳನ್ನು ಪಂಚನಾಮೆ ಸಂದರ್ಭದಲ್ಲಿ ತೆಗೆದಿರುವುದಾಗಿ ನೋಡಿ ಗುರುತಿಸಿದ್ದು, ಆದಕಾರಣ ಸದರಿ ಪೋಟೋಗಳನ್ನು ನಿಪಿಃ 4 ಮತ್ತು ನಿಪಿಃ5 ಎಂದು ಗುರುತಿಸಲಾಯಿತು.

8. ನ್ಯಾಯಾಲಯದ ಮುಂದೆ ಬಿಳಿ ಬಟ್ಟೆಯಿಂದ ಪ್ಯಾಕ ಮಾಡಿ ಸೀಲು ಮಾಡಿದ 2 ವಸ್ತುಗಳು ಇದ್ದು, ಅವುಗಳ ಸೀಲು ಮತ್ತು ಪ್ಯಾಕ ತೆಗೆದು ಸಾಕ್ಷಿಗೆ ತೋರಿಸಿ, ಗುರುತಿಸಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋೀಕರು ಕೋರಿದ್ದು, ಅನುಮತಿ ನೀಡಲಾಯಿತು. ಮಾನ್ಯ ಸರ್ಕಾರಿ ಅಭಿಯೋೀಜಕರ, ಆರೋಪಿತರ ಹಾಗೂ ಆರೋಪಿತರ ವಕೀಲರ ಸಮಕ್ಷಮದಲ್ಲಿ ತೆರೆದ ನ್ಯಾಯಾಲಯದಲ್ಲಿ 2 ವಸ್ತುಗಳ ಪ್ಯಾಕ್ ಮತ್ತು ಸೀಲನ್ನು ತೆಗೆದು ಸಾಕ್ಷಿಗೆ ತೋರಿಸಲಾಗಿ, ಅದರಲ್ಲಿದ್ದಂತಹ 1. ಕಟ್ಟಿಗೆ ಮತ್ತು 2. ಅದರ ಒಂದು ತುಂಡಾಗಿದ್ದು ಅವುಗಳನ್ನು ಒಟ್ಟಾಗಿ ಎಮ್.ಓ .1 ಎಂದು ಗುರುತಿಸಲಾಯಿತು. ಪೋಲಿಸರು ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**<u>ಪಾಟೀ ಸವಾಲು: 2 ನೇ ಆರೋಪಿತನ ಪರ ಶ್ರೀ.ವಿ.ಕೆ.ಪಿ ವಕೀಲರಿಂದ</u>**

ಈ ಹಂತದಲ್ಲಿ 2ನೇ ಆರೋಪಿತರ ಪರ ವಕೀಲರು ಶ್ರೀ.ವಿ.ಕೆ.ಪಿ ವಕೀಲರು ಗೈರು ಹಾಜರಾಗಿದ್ದು ಅವರ ಪರವಾಗಿ ಶ್ರೀ.ಬಸವರಾಜ ಖೋತ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಚೆನ್ನಪ್ಪ ಗೌಡ)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.